ದಿನಾಂಕ: 18-03-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು : 2 ರಿಂದ 5 ನೇ ಪ್ರತಿವಾದಿ ಪರ ಶ್ರೀ ಎಂ.ಎನ್.ಕೆ ವಕೀಲರಿಂದ,**

ದಾವಾ ಆಸ್ತಿಯಲ್ಲಿ ನಾನಾಗಲಿ ಅಥವಾ ನಾನು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಎಂದು ನನಗ ನೆನಪಿಲ್ಲ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 2 ರಿಂದ 5 ನೇ ಪ್ರತಿವಾದಿಯವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 2 ರಿಂದ 5 ನೇ ಪ್ರತಿವಾದಿಯ ತಾತನ ಆಸ್ತಿ ಎಂದರೆ ಸರಿಯಲ್ಲ. ದಿಃ12.05.1975 ರಲ್ಲಿ 2 ರಿಂದ 5 ನೇ ಪ್ರತಿವಾದಿಯವರು ದಾವಾ ಆಸ್ತಿಯ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವರ ತಾತನ ಕಾಲದಿಂದ 2 ರಿಂದ 5 ನೇ ಪ್ರತಿವಾದಿಯವರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**ಪಾಟೀಸವಾಲು : 1 ನೇ ಪ್ರತಿವಾದಿ ಪರ ಶ್ರೀ ಎ.ಹೆಚ್.ಎಸ್ ವಕೀಲರಿಂದ,**

ನನ್ನ ತಂದೆಯ ಹೆಸರು ಗಂಗಪ್ಪ. ನನ್ನ ತಾಯಿಯ ಹೆಸರು ಸಿದ್ದಮ್ಮ. ನಮ್ಮ ತಂದೆ ತಾಯಿಗೆ 9 ಜನ ಮಕ್ಕಳು. ನಮ್ಮ ಅಜ್ಜನ ಹೆಸರು ಹೊನ್ನುರಪ್ಪ. ಹೊನ್ನುರಪ್ಪನ ಹೆಂಡತಿಯ ಹೆಸರು ಗೊತ್ತಿಲ್ಲ. ಹೊನ್ನುರಪ್ಪ ರವರಿಗೆ ಒಬ್ಬನೇ ಮಗ. ಹೊನ್ನುರಪ್ಪ ರವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದ ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಸರ್ಕಾರದವರು ಹೊನ್ನುರಪ್ಪ ಮತ್ತು ಗಂಗಪ್ಪ ರವರಿಗೆ ದಾವಾ ಆಸ್ತಿ ಮಂಜೂರು ಮಾಡಿರುವುದಿಲ್ಲ ಎಂದರೆ ಸರಿ. ತಾಲೂಕು ಕಚೇರಿಯಲ್ಲಿ ನಾನು

ಹೊನ್ನುರಪ್ಪ ಮತ್ತು ಗಂಗಪ್ಪ ರವರ ಹಸರಿನಲ್ಲಿ ಆದ ಪಟ್ಟಾ ನಕಲನ್ನು ನೋಡಿರುವುದಿಲ್ಲ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಕಿರುವುದಿಲ್ಲ.

ನಿಪಿ 1 ರಲ್ಲಿ ಸರಳಾಬಾಯಿ, ಸತ್ಯನಾರಾಯಣರಾವ್, ವಿಜಯ ವಿಠಲ್‌ರಾವ್, ಕೃಷ್ಣರಾವ್ ರವರ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ 1ನೇ ಪ್ರತಿವಾದಿಯ ತಂದೆ ಕುರುಬರ ಹೊನ್ನುರಪ್ಪ ರವರ ಹೆಸರು ಸಹ ಇರುತ್ತದೆ ಎಂದರೆ ಸರಿ. ಪಹಣಿಗಳು ಎಲ್ಲ ಅವರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ.

ನಿಪಿ 4 ರಲ್ಲಿ ಪ್ರತಿವಾದಿಗಳ ಹೆಸರು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಮೂಲತಃ 2ರಿಂದ 5ನೇ ಪ್ರತಿವಾದಿಯವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಅದು ಇನಾಮ್ ಜಮೀನು ಆಗಿರುತ್ತದೆ. ಕುರುಬರ ಹನುಮಂತಪ್ಪ ಸದರಿ ಜಮೀನುಗೆ ಸಂಬಂದಪಟ್ಟಂತೆ grant ಮಾಡಲು ಅರ್ಜಿ ಹಾಕಿದ್ದರು ಎಂದರೆ ಸರಿ. ನಂತರ ಭೂನ್ಯಾಯ ಮಂಡಳಿಯು ದಿಃ16.07.1970 ರಲ್ಲಿ ಅವರ ಹೆಸರಿಗೆ ದಾವಾ ಆಸ್ತಿ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಂಜೂರಾತಿಯ ಪ್ರಕಾರ ಕುರುಬರ ಹನುಮಂತಪ್ಪ ರವರ ಹೆಸರಿಗೆ ಪಹಣಿಯಲ್ಲಿ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಕುರುಬರ ಹನುಮಂತಪ್ಪ ರವರ ಮರಣ ನಂತರ 1ನೇ ಪ್ರತಿವಾದಿಯು ತನ್ನ ಹೆಸರಿಗೆ ಪಹಣಿಯನ್ನು ವರ್ಗಾವಣೆ ಮಾಡಿಸಿರುತ್ತಾರೆ ಎಂದರೆ ಸರಿ. ಹೊನ್ನುರಪ್ಪ ರವರಿಗೆ ಮಂಜೂರು ಆಗಿದ್ದ ದಿನದಿಂದ ಅವರು ಮತ್ತು ಅವರ ಕುಟುಂಬದವರು ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಕುರುಬರ ಹನುಮಂತಪ್ಪ ಮೂಲತಃ ಡಿ.ಅಂತಾಪುರ ಗ್ರಾಮದವರು ಎಂದರೆ ಸರಿ. ದಾವಾ ಆಸ್ತಿಯು ಡಿ.ಅಂತಾಪುರ ಗ್ರಾಮ ಮತ್ತು ಚಿಕ್ಕಅಂತಾಪುರ ಗ್ರಾಮದ ಮದ್ಯ

ಬರುತ್ತದೆ ಎಂದರೆ ಸರಿ. ಕುರುಬರ ಹನುಮಂತಪ್ಪ ರವರ ಹೆಸರಿಗೆ ಪಹಣಿ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಯು ಯಾರ ಹೆಸರಿನಲ್ಲಿ ಇದೆ ಎಂದು ಈಗಲೂ ಸಹ ತಿಳಿದುಕೊಂಡಿರುವುದಿಲ್ಲ ಆದರೆ ನಾನೇ ಸ್ವಾಧೀನದಲ್ಲಿ ಇರುತ್ತೇನೆ. ಸಾಕ್ಷಿ ಮುಂದುವರೆದು ಪ್ರತಿವಾದಿಯವರ ಹೆಸರಿನಲ್ಲಿ ದಾವಾ ಆಸ್ತಿ ಇದೆ ಎಂದು ಈಗ ತಿಳಿದುಕೊಂಡಿರುತ್ತೇನೆ. ಅವರ ಹಸೆರಿನಲ್ಲಿ ಇದ್ದ ಪಹಣಿ ಬಗ್ಗೆ ತಕರಾರು ಮಾಡಿ ಎಲ್ಲಿಯೂ ಸಹ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಸರ್ವೆಯವರು ಬಂದು ಸರ್ವೆ ಮಾಡಿದ ನಂತರ ದಾವಾ ಆಸ್ತಿ ಪ್ರತಿವಾದಿಯ ಹೆಸರಿಗೆ ಇದೆ ಎಂದು ಗೊತ್ತಾದ ಮೇಲ ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ನಾನು ಸಾಗುವಳಿ ಮಾಡುತ್ತಿದ್ದೇನೆ ಎಂದು ತೋರಿಸಲು ತೆರಿಗೆ ರಿಸೀದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅದೇ ರೀತಿಯಾಗಿ ದಾವಾ ಆಸ್ತಿಯಲ್ಲಿ ನಾನು ಬೆಳೆ ಹಾಕಿರುತ್ತೇನೆ ಎಂದು ತೋರಿಸಲು ಬೆಳೆ ದೃಢೀಕರಣ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

2010-11 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ರೂ.50 ಸಾವಿರ ಸಾಲ ಪಡೆದುಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅವರು ಸಾಗುವಳಿ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಸರ್ಕಾರದ ಆಸ್ತಿ ಎಂದು ತೋರಿಸಲು ದಾಖಲಾತಿಗಳನ್ನು ನಾನು ಹಾಕಿರುವುದಿಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಹಾಗೂ ತೆರಿಗೆ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ದಿಃ02.09.2022 ರಲ್ಲಿ ರೂ.75 ಸಾವಿರ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ

ಸಂಘದಲ್ಲಿ ದಿಃ14.06.2023 ರಂದು ರೂ.90 ಸಾವಿರ ಸಾಲ ಪಡೆದಿರುತ್ತಾರೆ ಎಂದು ದೃಡೀಕರಣ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ14.11.2022 ರಂದು ಗ್ರಾಮ ಲೆಕ್ಕಾಧಿಕಾರಿ, ಅಂತಾಪುರವರು 1 ನೇ ಪ್ರತಿವಾದಿಯು 2022-23 ನೇ ಸಾಲಿನಲ್ಲಿ ಮುಂಗಾರಿನಲ್ಲಿ ಸಜ್ಜೆ ಸಹ ಬೆಳೆದಿರುತ್ತಾರೆ ಎಂದು ಬೆಳೆ ದೃಡೀಕರಣ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ದಿಃ13.06.2023 ರಂದು 1 ನೇ ಪ್ರತಿವಾದಿ 2023-24 ಸಾಲಿನಲ್ಲಿ ಹತ್ತಿ ಸಹ ಬೆಳೆದಿರುತ್ತಾರೆ ಎಂದು ಬೆಳೆ ದೃಡೀಕರಣ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಇವತ್ತಿಗೂ ಸಹ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದು ಸಾಗುವಳಿ ಮತ್ತು ಉಳಿಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಸರ್ವೆ ನಂಃ71 ಸರ್ಕಾರದವರು ನನಗ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 71 ನನಗೆ ಮಂಜೂರು ಆದ ನಂತರ ನನ್ನ ಹಸೆರಿನಲ್ಲಿ ಪಹಣಿ ಮಾಡಿಸಿಕೊಂಡು ಬೀರೆಯವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇರುವುದಿಲ್ಲ ನನಗೆ ಮಂಜೂರು ಮಾಡಿರುವ ಜಮೀನನ್ನು ಮಾರಾಟ ಮಾಡಿ ಪ್ರತಿವಾದಿಯ ಜಮೀನನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಹಣಿಯ ಸಾಗುವಳಿ ಕಾಲಂ

ನಲ್ಲಿ ಅವರ ಹೆಸರು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಗಲೂ ಸಹ ಪ್ರತಿವಾದಿಯೇ ದಾವಾ ಆಸ್ತಿಯ ಮೇಲೆ ತೆರಿಗೆ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಅನುಮತಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.